ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳಲ್ಲಿ ತಮ್ಮ ಮಂಖಾಂತರ ವಿಜ್ಞಾಪನೆ ಮಾಡಿ ಕೊಳ್ಳುತ್ತೇನೆ. ಯಾವ ಯಾವ ಕಾಮಗಾರಿ ಯಾವ ಹಂತದಲ್ಲಿ ಅವುಗಳನ್ನು ಜಿಲ್ಲಾಧಿಕಾರಿಗಳು ವರದಿ ಮೇಲೆ ಪರಿಶೀಲಿಸಿ ಪೂರ್ಣಗೊಳಿಸುತ್ತೇವೆಂದು ಹೇಳುತ್ತೀರಿ. ೧೩೦ ತಾಲ್ಲೋಕುಗಳಲ್ಲಿ ಸರ್ಕಾರದ ವತಿಯಿಂದ ಮಾತಿರುವ ಕಾಮಗಾರಿಗಳನ್ನು ನಿಲ್ಲಿಸಲಾಗಿದೆ ಅಲ್ಲಿ ಮಾಡುವ ಕಾಮಗಾರಿಗಳಿಗೆ ದುಡ್ಡು ಕೊಡಬೇಕು. ಆದರ ಬಗ್ಗೆ ಸ್ಪಷ್ಟವಾಗಿ ಉತ್ತರ ಬೇಕು ನೀವು ವಿಚಾರ ತಿಳಿದುಕೊಳ್ಳುವವರೆಗೆ ಊರು ಬೆಂದು ಹೋಗುತ್ತದೆ ದೊಡ್ಡ ಮಾತನ್ನು ಮಾಡಿ ಆಪತ್ತಿಗೆ ಕೊಡಿಸಬೇಕು ಮಾನ್ಯ ಅಧ್ಯಕ್ಷರೇ, ೧೪ ಡಿಸ್ಟ್ರಿಕ್ಟ್‌ಗಳ ಬಗ್ಗೆ ನಮಗೆ ಶಂಕೆ ಉದ್ಭವವಾಗಿದೆ ತುಮಕೂರು, ಬೆಂಗಳೂರು, ಶಿವಮೊಗ್ಗ ಹಾಸನ ವಗೈರೆ ೧೪ ಜಿಲ್ಲೆಗಳಲ್ಲಿನ ಪರಿಸ್ಥಿತಿಯ ಬಗ್ಗೆ ನಮಗೆ ಒಂದು ಅನುಮಾನ ಬಂದಿದೆ. ಆದ್ದರಿಂದ ಸ್ಪಷ್ಟವಾದ ಉತ್ತರ ಮಾನ್ಯ ಮಂತ್ರಿಗಳು ಕೊಡಬೇಕಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತತ್ವಶಃ ನೋಡಿ ನಾವು ಶಂಕೆ ಇಟ್ಟುಕೊಂಡಿದ್ದರೆ ಅದನ್ನು ಬಗೆಹರಿಸಬಹುದು. ಹಾಗಿಲ್ಲದಿದ್ದರೆ ಅಂತಹ ಶಂಕೆಯನ್ನು ಬಗೆಹರಿಸುವುದು ಕಷ್ಟ. ಪರಿಸ್ಥಿತಿಯನ್ನು ತಿಳಿದುಕೊಂಡು ಹೇಳುವುದಾದರೆ ಕೆಲವು ಜಿಲ್ಲೆಗಳಲ್ಲಿ, ಹೇಳಿದಷ್ಟು ಕೆಲಸ ಇರಲಿ ಅದಕ್ಕಿಂತ ೨, ೩, ಪರಸ್ಪು ಹೆಚ್ಚಿಗೆ ಕೆಲಸ ಮಾಡಿದ್ದಾರೆ. ಅಂತಹ ಕಡೆ ಕೆಲಸಗಳನ್ನು ತಡೆ ಹಿಡಿದು ಅಲ್ಲಿನ ಪರಿಸ್ಥಿತಿಯನ್ನು ನೋಡಿ ವಿಷಯಗಳನ್ನು ತಿಳಿದು ತೀರ್ಮಾನ ತೆಗೆದುಕೊಳ್ಳಬೇಕು. ಹಿಡಿದಿರುವ ಕೆಲಸಗಳನ್ನು ಕಂಪ್ಲೀಟ್ ಮಾಡ ತ್ತೇವೆ ಎಂದು ಭರವಸೆ ಕೊಡುವುದು ಸ್ವಲ್ಪ ಕಷ್ಟ.

(*ii*) *Re*: Permits for movement of Ore

SRI B. SATYANARAYANA SINGH (Hospet).—Madam, I beg to call the attention of the Minister for Industries to the refusal to issue Geological permit for the movement of iron ore to Hospet Railway Station from Kallahalli, Jambunathanahalli and Vyasanakere Mines.

SRI N. CHIKKE GOWDA (Minister of State for Animal Husbandry).—It is reported by the Geologist, Bellary Division, Bellary, that he has not refused any party to issue permits for movement of Ore to Hospet Railway Station from Kallahalli Jambunathanahalli and Vyasanakere mines. The M.M.T.C. of India recently stopped taking ore to Hospet in view of huge stocks they have at Hospet and they have instructed the lessees of Jambunathanahalli, Vyasanakere and Kallahalli to divert the ore to Kariganur Railway Station.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಈ ಉದ್ಯಮದಲ್ಲಿ ೧೦ ಸಾವಿರ ೧೫ ಸಾವಿರ ಕೂಲಿಗಾರರು ನಿರತರಾಗಿದ್ದಾರೆ. ಈಗ ಹೇರಿರುವ ನಿರ್ಬಂಧದಿಂದ ಸಾವಿರಾರು ಕೂಲಿಕಾರರು ಕೆಲರ ಕಳೆದುಕೊಂಡಿದ್ದಾರೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇಲ್ಲವಾದರೆ ಅದನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎಲ್ಲರಿಗೂ ಕೆಲಸ ಸಿಗುವಂತೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

SRI N. CHIKKE GOWDA —The Geologist, Bellary, has not refused any permit as per the statement before me. They have given saveral permits from Kallahalli, Jambunathanahalli and Vyasanakere mines in the months of August and September not to poss any unemployment problem. The question only relates to stocking of ore at Hospet, because the MMTC want diversion of stocks from Hospet, the ore is diverted to Kariganur Railway Station. We have not stated that ore should not be transported or that exploration of ore should be stopped.

ಶ್ರೀ ಸತ್ಯನಾರಾಯಣ ಸಿಂಗ್ —ಬರಗಾಲದ ವಿಷಯ ಬಂತು ಬಿಜಾಪುರ ಜಿಲ್ಲೆಯಿಂದ, ರಾಯಚೂರು ಜಿಲ್ಲೆಯಿಂದ ಅನೇಕ ಜನರು ಕೆಲಸಮಾಡಿಕೊಂಡು ಬಂದು ಗಣಿಯಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ತಮ್ಮ ಉತ್ತರದಲ್ಲಿ ಹೇಳಿದ್ದೀರಿ ಹೊಸ ಪೇಟೆಯಲ್ಲಿ ಅಧಿಕ ಅದಿರು ಸಂಗ್ರಹ ಇರುವುದರಿಂದ ತೆಗೆದಂ ಕೊಳ್ಳುತ್ತಾ ಇಲ್ಲ ಈ ನಿರ್ಬಂಧ ಇವೊತ್ತು ಹೊಸಪೇಟೆಯಲ್ಲಿ ಇದೆ ನಾಳೆ, ಕರಗನೊರಿಗೆ ಬರುತ್ತದೆ, ಆಮೇಲೆ ತೋರಣಗಲ್ಲಿಗೆ ಬರುತ್ತದೆ ಈ ಪರಿಸ್ಥಿತಿ ಬಂದಾಗ ಯೋಚಿಸುವುದಕ್ಕಿಂತ ಈಗಲೇ ಹೆಚ್ಚಿಗೆ ವ್ಯಾಗನ್ ಕೊಟ್ಟರೆ ಅಲ್ಲಿ ಕೂಡಿ ಹಾಕಿರುವ ಅದಿರನ್ನು ಕ್ಲಿಯರ್ ಆಗುತ್ತದೆ. ಇದರ ಬಗ್ಗೆ ಕೇಂದ್ರ ಸರ್ಕಾರದ ವರನ್ನು ಒತ್ತಾಯಮಾಡುವುದಕ್ಕೆ ಏನುತೊಂದರೆ?

ಶ್ರೀ ಎನ್. ಚಿಕ್ಕೇಗೌಡ —ಈಗಾಗಲೇ ಹೇಳಿದಹಾಗೆ ಅದಿರನ್ನು ತೆಗೆಯುವುದನ್ನು ನಿಲ್ಲಿಸಿಲ್ಲ. ಸ್ಟಾಕ್ ಮಾಡುವ ಬಗ್ಗೆ ಹೇಳಿದ್ದೇನೆ. ಹೊಸಪೇಟೆ ರೈಲ್ವೆ ಸ್ಟೇಷನ್‌ನಲ್ಲಿ ಎಷ್ಟು ಸೌಧ್ಯವೋ ಅಷ್ಟು ಇಟ್ಟಿದ್ದೇವೆ.

ಶ್ರೀ ಟಿ. ಸತ್ಯನಾರಾಯಣ ಸಿಂಗ್ —ಗಣಿ ಮಾಲೀಕರು ರೈಲ್ವೆ ಸ್ಟೇಷನ್‌ಗೆ ರವಾನೆ ಮಾಡಿದರೆ ಮಂದೆ ಅದನ್ನು ತೆಗೆಯುವುದಕ್ಕೆ ಬಿಡುತ್ತೀರಾ?

ಶ್ರೀ ಎನ್. ಚಿಕ್ಕೇಗೌಡ —ಹೊಸಪೇಟೆ ರೈಲ್ವೆ ಸ್ಟೇಷನ್‌ನಲ್ಲಿ ಬಹಳ ಹೆಚ್ಚಿನ ಸ್ಟಾಕ್ ಇವೆ. ಆದುರಿಂದ ಕರಗನೂರಿಗೆ ಡೈವರ್ಟ್‌ಮಾಡಿ ಎಂದು ಹೇಳಿದ್ದೇವೆ. ಅದಿರು ತೆಗೆಯುವುದನ್ನು ನಿಲ್ಲಿಸಿ ಎಂದು ಹೇಳಿಲ್ಲ. ಅದಕ್ಕೆ ಮೇಲ್ಪಟ್ಟ ವಿವರಗಳು ಇದ್ದರೆ ಮಾನ್ಯ ಸದಸ್ಯರು ಕೊಟ್ಟರೆ ಪರಿಶೀಲಿಸುತ್ತೇನೆ.

MADAM SPEAKER.—The House will now rise and meet again tomorrow at 9 a.m.

The House adjourned at Fifteen Minutes past Six of the Clock to meet again at Nine of the Clock on Thursday, the 21st December 1972.

WD 18903 GPB—550—10-2-1974